ಹಿರಿಸಾವೆ ಬಳಿ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ

248(586); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಹಿರಿಸಾವೆ ಊರಿನ ಬಳಿ ಹಾದುಹೋಗುವ ಎನ್.ಹೆಚ್. 75ರ ವಿಸ್ತರಣೆ ಹಾಗೂ ರಿಪೇರಿ ಕಾರ್ಯ ಬಹಳ ಮಂದಗತಿಯಿಂದ ನಡೆಯುತ್ತಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶ್ರೀಕಂಠಯ್ಯ ವೃತ್ತದಿಂದ ಎರಡು ಕಿ.ಮೀ. ಉದ್ದಕ್ಕೂ ರಸ್ತೆ ಕಾಮಗಾರಿ ತಡವಾಗಿದ್ದು, ಧೂಳು, ಜೆಲ್ಲಿಕಲ್ಲುಗಳಿಂದ ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ವಿಪರೀತ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕಾಮಗಾರಿಗಳನ್ನು ಬೇಗ ಮುಗಿಸಲು ಸೂಚನೆ ನೀಡಲಾಗುವುದೇ;

ಇ) ಇದೇ ಹೆದ್ದಾರಿಯ ಕದಬಳ್ಳಿ ಹತ್ತಿರ ಬಿಂಡಿಗನವಿಲೆ–ತಿಪಟೂರು ರಸ್ತೆಯು ಹೆದ್ದಾರಿಯ ಮೂಲಕ ಹಾದು ಹೋಗುತ್ತಿದ್ದು, ವಾಹನ ಎರಡೂ ರಸ್ತೆಗಳಲ್ಲಿ ವಾಹನ ಸಂಚಾರ ಜಾಸ್ತಿ ಇದ್ದು, ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ತೀವ್ರ ಅನಾನುಕೂಲ ಆಗುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿಗೆ ಫ್ಲೈಓವರ್ ನಿರ್ಮಿಸಿ, ಬಿಂಡಿಗನವಿಲೆ–ತಿಪಟೂರು ರಸ್ತೆಯು ಕೆಳಗೆ ಹಾದು ಹೋಗುವಂತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ಬಂದಿದೆ.

ಹಿರಿಸಾವೆ ಹತ್ತಿರ ರಾಷ್ಟ್ರೀಯ ಹೆದಾರಿ–75 ಮೂಲ ಗುತ್ತಿಗೆಯಲ್ಲಿ ಕೆಳಸೇತುವೆಯನ್ನು ಅಳವಡಿಸಿರುವುದಿಲ್ಲ. ಅಂಡರ್‌ಪಾಸ್‌ಗಾಗಿ

ಸಾರ್ವಜನಿಕ ಬೇಡಿಕೆಯನ್ನು ಅನುಸರಿಸಿ ಕಾರ್ಯವ್ಯಾಪ್ತಿಯ ಬದಲಾವಣೆ ಪ್ರಯತ್ನವನ್ನು ಮಾಡಲಾಗುತ್ತದೆ. ಆದ್ದರಿಂದ ವಿನ್ಯಾಸದಲ್ಲಿ ಆದ ಕೆಲ ಬದಲಾವಣೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗಿದೆ.

ರಸ್ತೆ ನಿರ್ಮಾಣ ಕಾರ್ಯ ಕೈಗೊಳ್ಳುವ ಮುನ್ನ ಪೂರ್ವಭಾವಿಯಾಗಿ ಎಲೆಕ್ಟ್ರಿಕಲ್ ಕಂಬಗಳ ಹಾಗೂ ನೀರಿನ ಪೈಪುಗಳ ಸ್ಥಳಾಂತರಗೊಳಿಸುವಿಕೆ ಕೆಲಸಗಳು ಪ್ರಗತಿಯಲ್ಲಿದ್ದು ಕಾನೂನು ಮತ್ತು ಸುವ್ಯವಸ್ಥೆಗಳನ್ನು ಕಾಯ್ದು ಪೂರ್ತಿಗೊಳಿಸಲಾಗಿದೆ. ಮುಖ್ಯ ಕೆಲಸಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, ಕ್ರಮೇಣ ಪೂರ್ತಿಗೊಳಿಸಲಾಗುವುದು.

ಇ) ಬಿಂಡಿನವಲೆ–ತಿಪಟೂರು ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿಯು ಕದಬಹಳ್ಳಿ ಹತ್ತಿರ ಕ್ರಾಸಿಂಗ್ ಮಾಡುತ್ತಿದ್ದು, ಸದ್ಯ ಸಾರ್ವಜನಿಕರು ಕೆಳ ಸೇತುವೆ ನಿರ್ಮಾಣ ಮಾಡುವ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಈ ಕುರಿತಾಗಿ ಕನ್ಸೇಷನರ್‌ಗೆ ಅದಕ್ಕೆ ತಗಲುವ ವೆಚ್ಚದ ವಿವರ ಒದಗಿಸುವಂತೆ ಸೂಚಿಸಲಾಗಿದೆ.

ರಾಜ್ಯದಲ್ಲಿ ತೆಂಗು ಮತ್ತು ಅಡಿಕೆ ಬೆಳೆಹಾನಿಗೆ ಪರಿಹಾರ

249(587); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದಲ್ಲಿ ತೆಂಗು ಮತ್ತು ಅಡಿಕೆ ಬೆಳೆಯುವ ಕ್ಷೇತ್ರ ಎಷ್ಟು; ಜಿಲ್ಲಾವಾರು ವಿವರ ಒದಗಿಸುವುದು; ಕಳೆದ ವರ್ಷ ಬರಗಾಲ, ಕೊಳೆರೋಗ, ಕಪ್ಪು ತಲೆ ಕಂಬಳಿಹುಳು ರೋಗ, ನೀರಿನ ತೀವ್ರ ಕೊರತೆ ಇವುಗಳಿಂದ ಹಾನಿಗೊಳಗಾದ ಅಡಿಕೆ ಮತ್ತು ತೆಂಗಿನ ಮರಗಳ ಕ್ಷೇತ್ರ, ಮರಗಳ ಸಂಖ್ಯೆ ಇವುಗಳ ಜಿಲ್ಲಾವಾರು ವಿವರ ಒದಗಿಸುವುದು;

ಆ) ಅಡಿಕೆ ಮತ್ತು ತೆಂಗು ಬೆಳೆ ಹಾನಿಗೆ ರಾಜ್ಯ ಸರ್ಕಾರದಿಂದ ಇದುವರೆಗೆ ನೀಡಿರುವ ಪರಿಹಾರ ಎಷ್ಟು; ಜಿಲ್ಲಾವಾರು ವಿವರ ಒದಗಿಸುವುದು;